ಎಂ ವಿ ಸಿ ನಂ.1466/2022
ಪಿ.ಡಬ್ಲ್ಯು- 1

ದಿನಾಂಕಃ 21-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆಃ</u>** <u>ಅರ್ಜಿದಾರರ ಪರ ಶ್ರೀ ಎಮ್ ಟಿ ಹೆಚ್ ವಕೀಲರಿಂದ.</u>

ಬಸ್ಸಿನ ಟಿಕೇಟು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-13 ಎಂದು, ಒಂದು ಜನತಾ ಬಜಾರ ಬಿಲ್ಲು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-14 ಎಂದು, 10 ವೈದ್ಯಕೀಯ ಬಿಲ್ಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಒಟ್ಟಾರೆಯಾಗಿ ನಿಪಿ-15 ಎಂದು, 4 ಜನ ಔಷಧಿ ಬಿಲ್ಲು, 4 ವೈದ್ಯಕೀಯ ಬಿಲ್ಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-16 ಮತ್ತು ನಿಪಿ-17 ಎಂದು ಗುರುತಿಸಲಾಯಿತು. ನಿಪಿ-14 ರಿಂದ ನಿಪಿ-17 ದಾಖಲೆಗಳನ್ನು ನಿಶಾನೆ ಅಂತಾ ಗುರುತಿಸಲು ಎದುರುದಾರ ನಂ.3 ರವರ ಪರ ವಕೀಲರು ಆಕ್ಷೇಪಣೆ ವ್ಯಕ್ತಪಡಿಸಿದ್ದು ಅವರ ಆಕ್ಷೇಪಣೆಗೆ ಒಳಪಟ್ಟು ರುಜುವಾತಿನ ಭಾರದೊಂದಿಗೆ ನಿಶಾನೆ ಅಂತಾ ಗುರುತಿಸಲಾಯಿತು. ಅಂಗನೂನ್ಯತೆ ಪ್ರಮಾಣ ಪತ್ರ ಹಾಗೂ ಕ್ಷ-ಕಿರಣ ವರದಿ ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-18 ಮತ್ತು ನಿಪಿ-19 ಎಂದು ಗುರುತಿಸಲಾಯಿತು. ಕ್ಲಾರಿಫಿಕೇಶನ್ ಸರ್ಟಿಫಿಕೇಟ್ ಎಂಬ ದಾಖಲೆ ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-20 ಎಂದು ಎದುರುದಾರ ನಂ.3 ರವರ ಪರ ವಕೀಲರು ಆಕ್ಷೇಪಣೆ ವ್ಯಕ್ತಪಡಿಸಿದ್ದು ಅವರ ಆಕ್ಷೇಪಣೆಗೆ ಒಳಪಟ್ಟು ರುಜುವಾತಿನ ಭಾರದೊಂದಿಗೆ ನಿಶಾನೆ ಅಂತಾ ಗುರುತಿಸಲಾಯಿತು.

ಆದ್ದರಿಂದ ನಾನು ಕೋರಲಾದಂತೆ ಅರ್ಜಿಯನ್ನು ಖರ್ಚು ಸಹಿತ ಮಂಜೂರು ಮಾಡಲು ಪ್ರಾರ್ಥಿಸುತ್ತೇನೆ.

<u>ಪಾಟೀಸವಾಲುಃ- ಎದುರುದಾರರ ನಂ.**3** ಪರ ಶ್ರೀ. ಎನ್ ಡಿ ವಕೀಲರಿಂದ.</u>

ನಾನು ಶಾಲೆ ಕಲಿತಿಲ್ಲ. ನನಗೆ 35 ವರ್ಷ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ. ನನ್ನ ವಯಸ್ಸು 38-39 ಇರಬಹುದು. ನಾನು ಪ್ರತಿ ತಿಂಗಳು ರೂ.35 ಸಾವಿರ ಆದಾಯ ಪಡೆಯುತ್ತಿರುವುದಾಗಿ ಹೇಳಿದ್ದು ಅದರ ಕುರಿತು ಕಾಗದ ಪತ್ರ ಹಾಜರುಪಡಿಸಿಲ್ಲ. ನಾನು ದಿನಾಂಕ 15-10-2021 ರಂದು ಕೆಎಸ್ಆರ್‌ಟಿಸಿ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದೆ ಎಂದರೆ ಸರಿ. ಅಪಘಾತವು ಲಕ್ಷ್ಮೇಶ್ವರ ಗದಗ ರಸ್ತೆಯ ಮಾಗಡಿ ಗ್ರಾಮದ ಸಮೀಪ ಆಗಿರುತ್ತದೆ ಎಂದರೆ ಸರಿ. ಟಾಟಾಎಸಿ ವಾಹನ ರಸ್ತೆಯ ಎಡಭಾಗದಲ್ಲಿ ನಿಂತಿತ್ತು ಎಂದರೆ ಸರಿಯಲ್ಲ. ಆ ವಾಹನ ಬಲಭಾಗದಲ್ಲಿ ನಿಂತಿತ್ತು ಎಂದು ಹೇಳುತ್ತಿದ್ದು, ಎಷ್ಟು ಅಂತರದಲ್ಲಿ ನಿಂತಿತ್ತು ಎಂದು ಹೇಳಲು ಬರುವುದಿಲ್ಲ. ನಾನು ಬಸ್ಸಿನ ಎಡಭಾಗದ ಮಧ್ಯದ ಸೀಟಿನಲ್ಲಿ ಕುಳಿತಿದ್ದು ಇತ್ತು. ಆ ದಿವಸ ಬಸ್ಸು ಬಹಳ ರಶ್ ಇತ್ತು ಎಂದರೆ ಸರಿಯಲ್ಲ. ನಾನು ಹಾಗೇ ಮಧ್ಯದ ಸೀಟಿನಲ್ಲಿ ಕುಳಿತಿದ್ದರಿಂದ ಬಸ್ಸಿನ ಮುಂದೆ ಆಗುತ್ತಿದ್ದ ಘಟನೆ ಗೊತ್ತಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಹಾಗೇ ನನಗೆ ಏನು ಗೊತ್ತಿಲ್ಲದಿದ್ದರೂ ಇರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿವಸ ಬಸ್ಸಿನ ಚಾಲಕ ಬಸ್ಸನ್ನು ವೇಗವಾಗಿ ಚಲಾಯಿಸುತ್ತಿದ್ದರು ಎಂದರೆ ಸರಿ. ಚಾಲಕನಿಗೆ ತನ್ನ ಮುಂದೆ ಗಾಡಿ ನಿಂತಿರುವ ಬಗ್ಗೆ ಗೊತ್ತಾಗುತ್ತದೆ ಎಂದರೆ ಸರಿ. ಬಸ್ಸಿನ ಚಾಲಕ ರಸ್ತೆ ತಿರುವನ್ನು ನೋಡದೇ ಮುಂದಿನ ವಾಹನಕ್ಕೆ ವೇಗದಿಂದ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿ. ಅಪಘಾತವು ಕೆಎಸ್ಆರ್‌ಟಿಸಿ ಬಸ್ಸ ಚಾಲಕನ ದುಡುಕುತನದ ವಾಹನ ಚಾಲನೆಯಿಂದ ಆಗಿರುತ್ತದೆ ಎಂದರೆ ಸರಿ. ಟಾಟಾಎಸಿ ವಾಹನದ ಚಾಲಕನ ತಪ್ಪು ಏನು ಇಲ್ಲ ಎಂದರೆ ಸರಿ. ಅಪಘಾತದ ಬಗ್ಗೆ ಪೊಲೀಸರಿಗೆ ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಹಾಗೇ ಹೇಳಿಕೆಯಲ್ಲಿ ಕೆಎಸ್ಆರ್‌ಟಿಸಿ ಬಸ್ಸ ಚಾಲಕನ ದುಡುಕುತನದ ವಾಹನ ಚಾಲನೆಯಿಂದ ಆಗಿರುತ್ತದೆ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ಅಪಘಾತವಾದಾಗ ನನಗೆ ಎಡಗೈ ತೋಳಿಗೆ, ಚಪ್ಪೆಗೆ, ನಡಕ್ಕೆ ಗಾಯ ಆಗಿತ್ತು. ಅಪಘಾತವಾದ ನಂತರ ಚಿಕಿತ್ಸೆಗೆಂದು ಗದಗ ಜಿಲ್ಲಾ ಆಸ್ಪತ್ರೆಗೆ ಸೇರಿಕೆ ಆಗಿರುತ್ತೇನೆ. ನಂತರ ಹೆಚ್ಚಿನ ಚಿಕಿತ್ಸೆಗೆ ಕೀಮ್ಸ ಆಸ್ಪತ್ರೆಗೆ ಸೇರಿಕೆ ಆಗಿರುತ್ತೇನೆ. ಅಲ್ಲಿ 1 ತಿಂಗಳು ವರೆಗೆ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಅಲ್ಲಿ

ಎಡಗೈಗೆ ಚಿಕಿತ್ಸೆ ಮಾಡಿರುತ್ತಾರೆ. ಎಡಗೈಗೆ ನೀಡಿದ ಚಿಕಿತ್ಸೆಯ ಹೊರತು ನನಗೆ ಯಾವುದೇ ಇನ್ನಿತರ ಚಿಕಿತ್ಸೆ ಕೊಟ್ಟಿಲ್ಲ ಎಂದರೆ ಸರಿ. ಕೀಮ್ಸ್ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ನೀಡಲಾಗುತ್ತದೆ ಎಂದರೆ ಸರಿಯಲ್ಲ. ನಾನು ಗುಣಮುಖ ಹೊಂದಿದ ನಂತರ ಕೀಮ್ಸ್ ಆಸ್ಪತ್ರೆಯಿಂದ ಬಿಡುಗಡೆ ಹೊಂದಿರುತ್ತೇನೆ ಎಂದರೆ ಸರಿ. ಸಾಕ್ಷಿ ಸವಣೂರು ಮತ್ತು ಶಿಗ್ಗಾಂವ ಆಸ್ಪತ್ರೆಯಲ್ಲಿ ಮತ್ತೆ ಚಿಕಿತ್ಸೆ ಪಡೆದುಕೊಂಡಿರುವುದಾಗಿ ನುಡಿಯುತ್ತಾರೆ. ಅದೇ ರೀತಿ ಹಾವೇರಿ ಆಸ್ಪತ್ರೆಯಲ್ಲಿ ಸಹ ಚಿಕಿತ್ಸೆ ಪಡೆದುಕೊಂಡಿರುವುದಾಗಿ ನುಡಿಯುತ್ತಾರೆ. ಈ ಕುರಿತು ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನನಗೆ ಚಿಕಿತ್ಸೆ ನೀಡಿದ ಕೀಮ್ಸ್ ಆಸತ್ರೆಯ ವೈದ್ಯರಲ್ಲಿ ಅಂಗನೂನ್ಯತೆ ಪ್ರಮಾಣ ಪತ್ರ ನೀಡುವಂತೆ ಕೋರಿಲ್ಲ. ಹಾಗೇ ಪ್ರಮಾಣ ಪತ್ರ ಬೇಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಹಾವೇರಿಯಲ್ಲಿ 3-4 ಸಲ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಇದರ ಬಗ್ಗೆ ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ನಿಪಿ-18 ದಾಖಲೆಯನ್ನು ವೈದ್ಯಾಧಿಕಾರಿಗಳೊಂದಿಗೆ ಶಾಮೀಲು ಆಗಿ ನನಗೆ ಯಾವುದೇ ಅಂಗನೂನ್ಯತೆ ಬರದೇ ಇದ್ದರೂ ಸಹ ಈ ಪ್ರಕರಣದಲ್ಲಿ ಹೆಚ್ಚಿಗೆ ಪರಿಹಾರ ಪಡೆಯುವ ಉದ್ದೇಶದಿಂದ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಲಕ್ಷ್ಮಣ ನಾಯಕ ಇವರ ಮುಂದೆ ಚಿಕಿತ್ಸೆ ಪಡೆದುಕೊಂಡ ಬಗ್ಗೆ ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿರುವ ಬಿಲ್ಲುಗಳಲ್ಲಿ ಹಣ ಪಾವತಿ ಮಾಡಿದ ಬಗ್ಗೆ ಎಲ್ಲಿಯೂ ನಮೂದು ಇಲ್ಲ ಎಂದರೆ ಸರಿಯಲ್ಲ. ನಾನು ವೈದ್ಯಕೀಯ ಸಲಹಾ ಚೀಟಿ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಬಿಲ್ಲುಗಳನ್ನು ಈ ಪ್ರಕರಣದಲ್ಲಿ ಅನುಕೂಲವಾಗುವ ರೀತಿಯಲ್ಲಿ ತಯಾರಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಕೈಗೆ ಹಾಕಿದ ರಾಡನ್ನು ಕೀಮ್ಸ್ ಆಸ್ಪತ್ರೆಯಲ್ಲಿ ತೆಗೆಯಲು ಪ್ರಯತ್ನ ಮಾಡಿಲ್ಲ ಎಂದರೆ ಸರಿ. ಈಗಾಗಲೇ ನಾನು ರಾಡು ತೆಗೆಸಿರುತ್ತೇನೆ ಎಂದರೆ ಸರಿ. ನಾನು ರಾಡನ್ನು ಕೀಮ್ಸ್ ಆಸ್ಪತ್ರೆಯಲ್ಲಿ ತೆಗೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ರಾಡನ್ನು ಲಕ್ಷ್ಮಣ ನಾಯಕ ವೈದ್ಯರಲ್ಲಿ ತೆಗೆಸಿದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ಲಕ್ಷ್ಮಣ ನಾಯಕ ಇವರು ರಾಡ ತೆಗೆಯಲು ರೂ. 1,50,000/- ಖರ್ಚಾಗುತ್ತದೆ ಎಂದು ಸುಳ್ಳು ಪ್ರಮಾಣ ಪತ್ರ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಾಗೇ ಹೆಚ್ಚಿಗೆ ಖರ್ಚು ಆಗುತ್ತದೆ ಎಂದು ಸುಳ್ಳು ಪ್ರಮಾಣ ಪತ್ರ

ತಯಾರಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಈಗ ನನಗೆ ತೆಗೆಸುವ ಯಾವುದೇ ರಾಡ ಇಲ್ಲ ಎಂದರೆ ಸರಿ.

2. ನಾನು ಕೂಲಿ ಕೆಲಸ ಮಾಡುತ್ತೇನೆ. ನಾನು ನಮ್ಮ ಮನೆಯ ಕೆಲಸವನ್ನು ಈಗ ಮಾಡುತ್ತೇನೆ ಎಂದರೆ ಸರಿ. ನನ್ನ ಗಂಡ ವ್ಯವಸಾಯಕ್ಕೆ ಸಂಬಂಧಿಸಿದ ಕೂಲಿ ಕೆಲಸ ಮಾಡುತ್ತಾರೆ. ನನಗೆ ಗಾಯದಿಂದ ಯಾವುದೇ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ. ಟಾಟಾಏಸಿ ಗಾಯ ವಾಹನದ ಚಾಲಕನ ಏನು ತಪ್ಪು ಇಲ್ಲದೇ ಇದ್ದರೂ ಸಹ ಸಂಸ್ಥೆಯವರು ಹಾಗೂ ನಾನು ಆ ಚಾಲಕನ ಮೇಲೆ ಖೊಟ್ಟಿ ದೋಷಾರೋಪಣೆ ಪಟ್ಟಿ ಸಲ್ಲಿಸುವಂತೆ ನೋಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆದ್ದರಿಂದ 3 ನೇ ಎದುರುದಾರರು ನನಗೆ ಪರಿಹಾರ ನೀಡುವ ಯಾವುದೇ ಹೊಣೆಗಾರಿಕೆ ಹೊಂದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).